**ಅಮ್ಮ:** ಏನೋ ನಿನ್ನ ಹೆಂಡ್ತಿ, ವಾರದಿಂದ ಸೂರ್ಯೋದಯಕ್ಕೂ ಮುನ್ನ ಎದ್ದು ಸ್ನಾನ ಮಾಡಿ, ಸರ್ವಾಲಂಕಾರ ಭೂಷಿತೆಯಾಗಿ ಇರ್ತಾಳೆ. ಏನ್ ಸಮಾಚಾರ?
**ಮಗ:** ಉದ್ದೇಶ ಹೇಳಿಕೊಳ್ಳುವಂತಹದ್ದು ಏನೂ ಇಲ್ಲ. ಅವಳು ಅಲಂಕಾರ ಮಾಡಿಕೊಳ್ಳದೆ ಇದ್ರೆ ಅವಳ ಮೊಬೈಲ್ ಫೇಸ್ ರೆಕಗ್ನಿಷನ್ ಮಾಡೊಲ್ಲ ಅಂತ ಹಾಗೆ ಮಾಡ್ತಿದ್ದಾಳೆ.

**ಅಪ್ಪ:** ಎಲೆ ಮರೆಯ ಕಾಯಿಯಂಗೆ ಇರಬೇಕು ಗೊತ್ತಾಯ್ತಾ?
**ಮಗ:** ಹೌದಪ್ಪಾ... ಹಣ್ಣಾದ್ರೆ ಜನ ಕಿತ್ಕೊಂಡು ತಿಂದುಬಿಡ್ತಾರೆ.

**ವೆಂಕಟ:** ನೋಡಯ್ಯ ಬಾಲಾಜಿ, ನಿನ್ನನ್ನು ಇಂದಲ್ಲ ನಾಳೆ ಬೀದೀಲಿ ನಿಲ್ಲಿಸೇ ನಿಲ್ಲಿಸ್ತೀನಿ.
**ಬಾಲಾಜಿ:** ನಿಲ್ಲಿಸೋದು ನಿಲ್ಲಿಸ್ತೀಯಾ, ಯಾವ್ದಾದ್ರೂ ಮರದ ಕೆಳಗೆ ನಿಲ್ಲಿಸು. ನೆರಳಾದ್ರೂ ಇರುತ್ತೆ.





ನಮ್ಮಪ್ಪ ಇಲ್ಲಿಗೆ ತಮ್ಮ 'ದೇಹದಾನ' ನೀಡಿದ್ದಾರೆ... ಇಂದು ಅವರ 'ಸ್ಮರಣಾದಿನ'

**ಶಿಷ್ಯ:** ಗುರುವರ್ಯ, ದೇವರು ನನ್ನ ಕನಸಿನಲ್ಲಿ ಬಂದು ದರ್ಶನ ಕೊಡ್ತಾನೆ. ನಿಜರೂಪದಲ್ಲಿ ಯಾಕೆ ದರ್ಶನ ಕೊಡೊಲ್ಲ.
**ಗುರುವರ್ಯ:** ನಿಜರೂಪದಲ್ಲಿ ಕೊಟ್ಟರೆ ನೀನೆ ನಂಬಲ್ಲ. ನಂಬಿ ಈ ವಿಚಾರವನ್ನು ನೀನು ಬೇರೆಯವರಿಗೆ ಹೇಳಿದ್ರೆ ಅವರು ನಿನ್ನನ್ನು ಹುಚ್ಚ ಅಂತಾರೆ ಅದಕ್ಕೆ.

ಪೂಜಾರ್ ಕ್ರಿಕೆಟ್‌ನಿಂದ ನಿವೃತ್ತಿ



ಹೇಗೊ ಕಾಮೆಂಟ್ರಿ ಸೀಟ್ ಇದೆ. ಅದನ್ನೇ ಮುಂದುವರೆಸಿಕೊಂಡು ಹೋಗಬಹುದು.




ಈಗ ಸಿಎಂ ಆಗಲು ಆಸೆ ಪಟ್ಟವರು ಹಿಂದೆ ಮುಂದೆ ನೋಡ್ತಾ ಇರಬಹುದು.

**ಪತ್ರಕರ್ತ:** ನಿರ್ದೇಶಕರೆ ಹೊಚ್ಚ ಹೊಸ ಲವ್ ಸ್ಟೋರಿ, ಎವರ್‌ಗ್ರೀನ್ ಸ್ಟೋರಿ, ಪವರ್‌ಫುಲ್ ಸ್ಟೋರಿ ಅಂತೆಲ್ಲ ಪ್ರಚಾರ ಮಾಡಿದ್ದೀರಿ. ಈ ಕತೆ ಹತ್ತು ವರ್ಷಗಳ ಹಿಂದೆಯೇ ಮ್ಯಾಡ್ ಲವ್ ಸ್ಟೋರಿ ಅಂತ ಸಿನಿಮಾ ಆಗಿತ್ತು.
**ನಿರ್ದೇಶಕ:** ಅದಕ್ಕೆ ನಮ್ಮ ಸಿನಿಮಾಗೆ ಕಾಕತಾಳೀಯ ಅಂತ ಹೆಸರು ಇಟ್ಟಿದ್ದೀವಿ.

**ಪತ್ರಕರ್ತ:** ಏನ್ ಸಾರ್, ಪ್ರತಿ ಬೀದಿಯಲ್ಲೂ ಗಣೇಶ ಚತುರ್ಥಿಯಂದು ಗಣೇಶನ ಪ್ರತಿಷ್ಠಾಪನೆ ಮಾಡಬೇಕು ಅಂತ ಕರೆ ಕೊಟ್ಟಿದ್ದೀರಿ, ಇದರ ಹಿಂದಿನ ಉದ್ದೇಶ ಏನು?
**ಶಾಸಕ:** ಕಡೆ ಪಕ್ಷ ಪ್ರತಿ ಬೀದಿಯೂ ಸ್ವಚ್ಛವಾಗಲಿ ಅಂತ.

**ಅಪ್ಪ:** ಮಗನೆ ನಿನ್ನ ವಯಸ್ಸಲ್ಲಿ ನಿತ್ಯ ನಾಲ್ಕೈದು ಜನ ನನಗಾಗಿ ಬರುತ್ತಿದ್ದರು.
**ತಾತ:** ಮೊಮ್ಮಗನೆ ಅವರೆಲ್ಲರೂ ಯಾಕೆ ಬರುತ್ತಿದ್ದರು ಅಂತ ಗೊತ್ತಾ? ನಿಮ್ಮಪ್ಪನಿಗೆ ಕೊಟ್ಟ ಸಾಲ ವಾಪಸ್ ಕೇಳಲು.

ಇವಿಎಂ ಬದಲಿಗೆ ಬ್ಯಾಲೆಟ್ ಮೂಲಕ ಚುನಾವಣೆ ಮಾಡಬೇಕು..ಕಾಂಗ್ರೆಸ್..!!




ಇದು ಮೋಸ..ಮೋಸಾ.."ಕೈ"ನಲ್ಲಿ ಹಿಡ್ಕೊಂಡು ಕಲ್ಲಿಟ್ಟು ತೂಕ ಮಾಡೊ ತಕ್ಕಡಿ ಬೇಕು..!!



ಗೋಡೆಗಳಿಗೂ ಕಿವಿ ಇದೆಯಂತೆ, ಅದಕ್ಕೆ ಎಲ್ಲಾದರೂ ಬೆಟ್ಟ ಗುಡ್ಡದ ಬಳಿ ಮಾತುಕತೆ ಮಾಡುವುದು ಒಳ್ಳೆಯದು.

**ವೆಂಕಟ:** ಏನಯ್ಯ ಬಾಲಾಜಿ ನಿಮ್ಮ ಮನೆ ನಾಯಿಯ ಬೆನ್ನಿನ ಮೇಲೆ 'ದಯೆ' ಅಂತ ಸ್ಟಿಕ್ಕರ್ ಅಂಟಿಸಿದ್ದೀಯಾ. ದಯೆ ಅನ್ನೋದು ನಾಯಿ ಹೆಸರಾ?
**ಬಾಲಾಜಿ:** ಏನಿಲ್ಲ, ಪ್ರಾಣಿಗಳ ಮೇಲೆ ದಯೆ ಇರಲಿ ಅಂತ ನಮ್ಮ ಗುರುಗಳು ಆಗಾಗ ಹೇಳ್ತಾ ಇರ್ತಾರೆ. ಅವರ ಮಾತನ್ನು ಧಿಕ್ಕರಿಸೋದು ಬೇಡ ಅಂತ ಆ ಸ್ಟಿಕ್ಕರ್ ಅಂಟಿಸಿದ್ದೀನಿ ಅಷ್ಟೇ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ